ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಹೊಸಕೋಟೆ ತಾಲ್ಲೂಕಿನಲ್ಲಿ ಕಳೆದ 5 ವರ್ಷಗಳಿಂದಲೂ ರಸ್ತೆ ರಿಪೇರಿಗಾಗಿ ಮತ್ತು ರಸ್ತೆಗಳ ನಿರ್ಮಾಣಕ್ಕಾಗಿ ಎಷ್ಟು ಹಣ ಖರ್ಚಾಗಿದೆಯೆಂದು ಕೇಳಿರುವುದಕ್ಕೆ ಇಲ್ಲಿ ಕೊಟ್ಟಿರುವ ಪರಿಶಿಷ್ಟದಲ್ಲಿ ರಿಪೇರಿಗಾದ ಖರ್ಚನ್ನು ಮಾತ್ರ ಕೊಟ್ಟಿದೆ. ಅಂದರೆ, ಹೊಸದಾಗಿ ಯಾವ ರಸ್ತೆ ನಿರ್ಮಾಣ ಕೆಲಸವೂ ಆಗಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಪರಿಶಿಷ್ಟದಲ್ಲಿ ಅದನ್ನೂ ಕೊಟ್ಟಿದೆ. ಹೊಸ ರಸ್ತೆಗಳನ್ನು ಮಾಡಿರುವುದನ್ನು ಕೂಡ 'Original works' ಎಂಬುದರಲ್ಲಿ ಸೇರಿಸಿದೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಸೇತುವೆಗಳಿಗೆ ಸಂಬಂಧಪಟ್ಟಂತೆ 'Original works' ಮಾಡಿದೆಯೆಂದು ಅಲ್ಲಿ ಹೇಳಿದೆ. ರಸ್ತೆಗಳನ್ನು ನಿರ್ಮಾಣ ಮಾಡಿರುವಂತೆ ಕಾಣುವುದಿಲ್ಲ.

Sri T. CHANNIAH.—Information furnished under Repairs and Special Repairs includes construction of new roads also.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಹೊಸಕೋಟೆ ಮೂಲೂರು ರಸ್ತೆಗಾಗಿ ಕಳೆದ 5 ವರ್ಷಗಳಿಂದಲೂ ಸಾಮಾನ್ಯವಾಗಿ 1,450 ರೂ. 1,482 ರೂ. ಈ ರೀತಿಯಾಗಿ ಮೊಬಲಗುಗಳನ್ನು ಒದಗಿಸಿದ್ದಾಗಿ ಹೇಳಿದ್ದೀರಿ. ಕಳೆದ ಮೂರು ನಾಲ್ಕು ವರ್ಷಗಳಿಂದಲೂ ಆ ರಸ್ತೆಗಳನ್ನು ನೋಡಿ ಅಲ್ಲಿನ ರಿಪೇರಿಗಳಿಗೆ ಹಣ ಸಾಕಾಗಿಲ್ಲವೆಂದು ಗೊತ್ತಾದಾಗ, ಇನ್ನು ಅಲ್ಲಿ ಹೊಸ ಕಾಮಗಾರಿಗಳನ್ನು ಕೈಕೊಳ್ಳುವುದು ಸಾಧ್ಯವೇ ?

ಶ್ರೀ ಟಿ. ಚನ್ನಯ್ಯ.—ಆ ರಸ್ತೆಯ ವಿಷಯದಲ್ಲಿ ಸರ್ಕಾರದವರಿಗೆ proposals ಬಂದರೆ ಪರಿಶೀಲಿಸುತ್ತೇವೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಬೆಂಗಳೂರು-ಕೋಲಾರ ರಸ್ತೆಯಲ್ಲಿ ಬಸ್ಸುಗಳನ್ನು ರಾಷ್ಟ್ರೀಕರಣ ಮಾಡಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಮಾಡಿದೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಬಸ್ ರಾಷ್ಟ್ರೀಕರಣ ಮಾಡಿರುವುದರಿಂದ ನಾಲ್ಕನೆಯ ದರ್ಜೆಯ ರಸ್ತೆಗಳಲ್ಲಿ ಸಾರ್ವಜನಿಕ ಬಸ್ಸುಗಳೆಲ್ಲಾ ಓಡಾಡಲು ಅವಕಾಶವಾಗಿ ಆ ಮಣ್ಣಿನ ರಸ್ತೆಗಳಲ್ಲಿ ಬಸ್ಸುಗಳು ವಿಶೇಷವಾಗಿ ತಿರುಗಾಡಿ ಸಾರ್ವಜನಿಕರ ಪ್ರಾಣಕ್ಕೂ ಮತ್ತು ಆ ಬಸ್ಸುಗಳಿಗೂ ಬಹಳ ಮಟ್ಟಿಗೆ ತೊಂದರೆ ಮತ್ತು ನಷ್ಟ ಉಂಟಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಆ ರೀತಿಯಾಗಿ ಕೆಲವು ಸಂದರ್ಭಗಳಲ್ಲಿ ಆಗಿದೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಹೊಸಕೋಟೆ ತಾಲ್ಲೂಕ್ ರಸ್ತೆಗಳಲ್ಲಿ ಹಾಗೂ 15ನೆಯ ನಂಬರಿನ ವೈಟ್‌ಫೀಲ್ಡ್‌ನಿಂದ ದೇವನಗೊಂದಿ ರಸ್ತೆ ಮತ್ತು ನಂದಗುಡಿ ರಸ್ತೆ, ತೋರನಹಳ್ಳಿ ರಸ್ತೆಗಳಲ್ಲಿ ವಿಶೇಷವಾಗಿ ಬಸ್ಸುಗಳು ಓಡಾಡುತ್ತಾ ಇದ್ದರೂ ಅವುಗಳ ರಿಪೇರಿಗಾಗಿ ವರ್ಷಕ್ಕೆ 200-300 ರೂಪಾಯಿಗಳ ಮೇಲೆ ಖರ್ಚುಮಾಡಿಲ್ಲ. ಅದರಲ್ಲೂ ಒಂದೆರಡು ವರ್ಷ ಏನೂ ಖರ್ಚುಮಾಡಿಯೇ ಇಲ್ಲ. ಇಂಥ ರಸ್ತೆಗಳಲ್ಲಿ ಏಳು-ಎಂಟು ಬಸ್ಸುಗಳನ್ನು ಹಾಕುವುದರಿಂದ ಆ ರಸ್ತೆಗಳ ಪರಿಸ್ಥಿತಿ ಏನಾಗುತ್ತದೆ ? ಅಂಥ ಸಂದರ್ಭಗಳಲ್ಲಿ ಹೆಚ್ಚಿಗೆ ಹಣ ಒದಗಿಸುತ್ತೀರಾ ?

Mr. SPEAKER.—The member must thank the Government. As per the figures for 1952-53 they have provided Rs. 20,000 more than in the previous year.

Relief works undertaken in Shimoga Taluk.

Q.—264. Sri S. R. NAGAPPA SETTY (Shimoga).—

Will the Government be pleased to state :—

(*a*) the relief works undertaken due to the failure of rains in Shimoga Taluk ;

(*b*) in how many villages, there is no drinking water ;

(*c*) the arrangements made to provide them with well or deepening the wells ;

(*d*) how many agriculturists had applied for takavi loans ;

(*e*) how many are sanctioned ;

(*f*) as they have no seed paddy, whether they arrange to supply seed paddy on loan and help them as the condition of agriculturists is very bad;

(*g*) whether they can stop lorry traffic and give labour to carry stones, mud, fuel and other commodities on bullock carts, as a relief measure to agriculturists ?

A.—Sri KADIDAL MANJAPPA (Minister for Revenue and Public Works).—

(*a*) No works have been undertaken so far by the Revenue Department. The work of sinking temporary wells at Kotegangur for providing drinking water to cattle has been taken up at present.

(*b*) In 48 villages, drinking water wells have not yet been provided out of rural water supply funds but water facilities are made available out of other sources, *viz.*, private wells, tanks and hondas.

(*c*) Action has been taken to provide wells to the villages where there is scarcity for drinking water.

(*d*) 151.

(*e*) 41 cases (Received 28).

89 pending for want of allotment. (Additional allotment of Rs. 1,825 sanctioned on 14th March 1953 and further allotment asked for).

(*f*) It is not feasible to issue seed paddy on loan basis as such a system is seen to result in considerable default and accumulation of arrears which are very difficult to collect.

(*g*) Not possible under the existing law as no such discrimination can be made.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಸಾಲದ ಅರ್ಜಿಗಳ ಮೇರೆ ಸಾಲಕೊಡುವುದು ಅಮಲ್ದಾರರ ಮರ್ಜಿಯ ಮೇರೆಯೇ ಅಥವಾ ಅದರ ಬಗ್ಗೆ ನಿಯಮ ನಿಬಂಧನೆಗಳಿವೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆರ್ಯಾ ಕ್ರಮ ಮತ್ತು ರೂಲ್ಸ್ ಇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—41 ಕೇಸುಗಳಲ್ಲಿ ಸಾಲಕೊಟ್ಟಿದೆಯೆಂದು ಹೇಳಿದ್ದೀರಿ. ಒಟ್ಟು ಎಷ್ಟು ಹಣ ಕೊಟ್ಟಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಬಾವಿಗಳನ್ನು ಹೆಚ್ಚಿಗೆ ಆಳವಾಡಿ ನೀರು ಒದಗಿಸಿದರೆ, ಅಲ್ಲಿ ಮಳೆಗಾಲದಲ್ಲಿ ನೀರು ತುಬಕೊಂಡರೂ ಬೇಸಿಗೆಯಲ್ಲಿ ನೀರಿರದೆ ಬತ್ತಿಹೋಗುತ್ತದೆಯೆಂಬುದು ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕಾಗಿಯೇ ಆಳ ಮಾಡುವುದು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ನೀವು ಈಗ ಮಾಡುತ್ತಿರುವಂತೆ ಮಾಡಿದರೆ, ಎಷ್ಟು ವರ್ಷಗಳಲ್ಲಿ ಈ ಸಮಸ್ಯೆಯನ್ನು ಪೂರೈಸುತ್ತೀರಿ ? ಪ್ರತಿವರ್ಷವೂ ಹೀಗೆ ಒಂದು-ಎರಡು ಮಾಡುತ್ತಿದ್ದರೆ ಎಂದಿಗೆ ಮುಗಿಯುತ್ತದೆ ! ಒಟ್ಟಿಗೆ ಎಲ್ಲ ಕಡೆಯೂ ನೀರೊದಗಿಸುವುದಕ್ಕೆ ಏರ್ಪಾಡುಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಏನೇ ಮಾಡಿದರೂ ಮಳೆ ಆಗಾಗ್ಗೆ ಸರಿಯಾಗಿ ಆಗುತ್ತಿದ್ದರೆ water level ಇರುತ್ತದೆ. ಈ ವರ್ಷ ಮಳೆ ಚೆನ್ನಾಗಿದೆ. ಈ ವರ್ಷ ತೊಂದರೆಯಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಅಲ್ಲಿ ಕಂದಾಯದ ರಿಯಾಯಿತಿ ಮಾಡುವುದಕ್ಕೇನಾದರೂ ಅವಕಾಶ ಮಾಡಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಸ್ಯಾಂಕ್ಷನ್ ಮಾಡಿದೆ.

Major and Minor Tanks in the State.

Q.—316. Sri G. BASAPPA (Hosadurga).—

Will the Government be pleased to state :—

(*a*) the number of major and minor tanks in the State ;

(*b*) the amount of irrigation cess collected every year under these tanks ;

(*c*) the amount of Government grant allotted every year for the last five years for the improvement of these tanks ;

(*d*) whether the raiyats are doing annual repairs to the tanks controlled by Revenue Department ?

A.—Sri KADIDAL MANJAPPA (Minister for Revenue and Public Works).—

(*a*) Major—2,596.
Minor—19,982.

(*b*) Rs. 2,55,481.

(*c*) A grant of Rs. 3.00 lakhs is being made available to the Irrigation Cess Fund Budget each year.

(*d*) Maintenance work by ryots is generally neglected and not attended to regularly every year.

ಶ್ರೀ ಜಿ. ಬಸಪ್ಪ.—(*d*) ಪ್ರಶ್ನೆಗೆ ಉತ್ತರವಾಗಿ, ರೈತರು ಯಾರೂ ಕೆರೆ ರಿಪೇರಿ ಕಾಮಗಾರಿ ಕೆಲಸವನ್ನು ಮಾಡುತ್ತಿಲ್ಲವೆಂದು ಹೇಳಿದ್ದೀರಿ. ಅಂದಮೇಲೆ ಕೆರೆಗಳ ರಿಪೇರಿ ಮತ್ತು maintenance ಕೆಲಸವನ್ನು ಈಗ ಯಾರು ಮಾಡುತ್ತಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ನಿರ್ವಾಹವಿಲ್ಲದೆ ಸರ್ಕಾರದವರು ಮಾಡುತ್ತಿದ್ದಾರೆ.

ಶ್ರೀ ಜಿ. ಬಸಪ್ಪ.—ಹೀಗೆ ಮಾಡಿದ ಸಂದರ್ಭದಲ್ಲಿ ಅವರಿಂದೇನಾದರೂ ಕಾಂಟ್ರಿಬ್ಯೂಷನ್ ವಸೂಲು ಮಾಡುತ್ತಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂದರ್ಭಗಳಲ್ಲಿ ವಸೂಲು ಮಾಡುತ್ತಿದ್ದೇವೆ.

ಶ್ರೀ ಜಿ. ಬಸಪ್ಪ.—ಅಂದರೆ ಅವರು ಇದಕ್ಕಾಗಿ ಏನಾದರೂ ಹೆಚ್ಚಿಗೆ ಹಣವನ್ನು ಕಂದಾಯದ ರೂಪದಲ್ಲಿ ಕೊಡುವಂತೆ ಮಾಡಿ ವಸೂಲು ಮಾಡುವುದಕ್ಕೆ ಸರ್ಕಾರದವರು ಯೋಚನೆ ಮಾಡಿದ್ದಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂದರ್ಭಗಳಲ್ಲಿ ಏಕರೇಜ್ ಸೆಸ್ ವಸೂಲು ಮಾಡುತ್ತಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಈ 19,982 ಮೈನರ್ ಕೆರೆಗಳೂ ಉಪಯೋಗದಲ್ಲಿವೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಇವೆ ಕೆಲವು ಇಲ್ಲ.

ಶ್ರೀ ಬಿ. ಹುಚ್ಚೇಗೌಡ.—ಎಷ್ಟು ಉಪಯೋಗದಲ್ಲಿಲ್ಲ ?

Mr. SPEAKER.—It is too big a question.

ಶ್ರೀ ಬಿ. ಹುಚ್ಚೇಗೌಡ.—19,982 ಮೈನರ್ ಕೆರೆಗಳಿವೆಯೆಂದು ಹೇಳಿದ್ದೀರಿ; ಇವುಗಳಲ್ಲಿ ಎಷ್ಟು ಉಪಯೋಗದಲ್ಲಿವೆಯೆಂದು ನಾನು ಕೇಳುತ್ತಿದ್ದೇನೆ.

Mr. SPEAKER.—How can that be given? That requires time.

ಶ್ರೀ ಬಿ. ಹುಚ್ಚೇಗೌಡ.—Maintenance work ರೈತರು ಮಾಡುತ್ತಿಲ್ಲವೆಂದು ಹೇಳಿದಿರಿ, ರೈತರು ಇದನ್ನು ಕೈಬಿಡುವುದಕ್ಕೆ ಕಾರಣ, ನೀವು ಆ ಕೆರೆಗಳ ಮೀನನ್ನು ಹರಾಜು ಮಾಡುತ್ತಿರುವುದೇ ಅಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಒಂದೇ ಕಾರಣವಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಹಿಂದಿನಿಂದಲೂ ರೈತರು ಈ ಕೆರೆಗಳಲ್ಲಿ ಮೀನು ತೆಗೆದುಕೊಂಡು ಮುಟ್ಟಿ ಕಾಮಗಾರಿ ಮಾಡುತ್ತಿದ್ದರು, ಈಗ ಮೀನು ಹಿಡಿಯುವುದನ್ನು ನೀವು ತಪ್ಪಿಸಿದ್ದರಿಂದ ಈ ಕೆಲಸವನ್ನು ಕೈ ಬಿಟ್ಟಿದ್ದಾರೆ.

Sri K. HANUMANTHAIYA.—I accept the suggestion of the Hon'ble Member. In fact, instructions have been given that in respect of minor tanks the fishing rights might be handed over to the villagers as was the practice previously, and the Fishing Department might confine their activities to major tanks.